# ಲಕ್ನೋದಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮ

ಲಕ್ನೋ ನಗರ ಹಿಮಾಲಯ ಪರ್ವತಪ್ರದೇಶಗಳಿಗೆ ಹೋಗಲು ಪ್ರವೇಶದ್ವಾರದಂತಿದೆ. ಸ್ವಾಮಿ ವಿವೇಕಾನಂದರು ತಮ್ಮ ಭಾರತ ಪರ್ಯಟನ ಸಮಯದಲ್ಲಿ ಲಕ್ನೋ ನಗರಕ್ಕೆ ಹಲವು ಭಾರಿ ಭೇಟಿಯಿತ್ತಿದ್ದರು. ಅವರ ಭೇಟಿಯಿಂದ ಸ್ಫೂರ್ತಿಗೊಂಡ ಕೆಲವು ಯುವಕರು ಲಕ್ನೋದ ಅಮೀನಾಬಾದ್‌ನಲ್ಲಿ ೧೯೧೪ರಲ್ಲಿ ಉಚಿತ ವೈದ್ಯಕೀಯ ಸೇವೆಯೇ ಮೊದಲಾದ ಸಮಾಜಸೇವಾ ಕಾರ್ಯಗಳನ್ನು ಕೈಗೊಂಡರು. ಅವು ಇಂದು ಲಕ್ನೋದಲ್ಲಿ ಬೃಹತ್ತಾಗಿ ಬೆಳೆದಿರುವ ರಾಮಕೃಷ್ಣ ಮಿಷನ್ ಸೇವಾಶ್ರಮಕ್ಕೆ ಕಾರಣ ರೂಪವಾಗಿವೆ. ಸೇವಾಶ್ರಮವು ಅಮೀನಾಬಾದ್‌ನಲ್ಲೇ ಜಾಗವೊಂದನ್ನು ಪಡೆದು ಸಾರ್ವಜನಿಕರ ಮತ್ತು ಭಕ್ತರ ಉದಾರ ಧನ ಸಹಾಯದಿಂದ ತನ್ನದೇ ಕಟ್ಟಡವನ್ನು ಹೊಂದಿತು. ೧೯೨೫ರಲ್ಲಿ ಈ ಸೇವಾಶ್ರಮವು ಕಲ್ಕತ್ತೆಯಲ್ಲಿನ ರಾಮಕೃಷ್ಣ ಮಠದ ಪ್ರಧಾನ ಕೇಂದ್ರವಾದ ಬೇಲೂರು ಮಠದ ರಾಮಕೃಷ್ಣ ಮಿಷನ್‌ಗೆ ಸೇರ್ಪಡೆಯಾಯಿತು.

ಸುಮಾರು ೪೩ ವರ್ಷಗಳವರೆಗೆ ರಾಮಕೃಷ್ಣ ಮಿಷನ್ ಸೇವಾಶ್ರಮವು ಅಮೀನಾಬಾದ್‌ನಲ್ಲೇ ತನ್ನ ಸೇವಾಕಾರ್ಯವನ್ನು ಮುಂದುವರೆಸಿಕೊಂಡು ಬಂದಿತ್ತು. ಸ್ಥಳೀಯ ಜನರಿಗೆ ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಸೇವೆಯನ್ನು ಎಲ್ಲ ಸಾಧ್ಯವಾದ ರೀತಿಯಲ್ಲಿ ಒದಗಿಸುತ್ತ ಬಂದಿತು. ೧೯೬೩ ಸ್ವಾಮಿ ವಿವೇಕಾನಂದರ ಜನ್ಮಶತಾಬ್ದ. ಆ ವರ್ಷ ಜನಸಾಮಾನ್ಯರಿಗಾಗಿ ಸುಸಜ್ಜಿತವಾದ ಆಸ್ಪತ್ರೆಯನ್ನು ತೆಗೆಯುವ ಯೋಜನೆಯನ್ನು ಹಾಕಲಾಯಿತು. ಆ ಸಂದರ್ಭದಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿಗಳಾಗಿದ್ದ ಶ್ರೀಮತಿ ಸುಚೇತಾ ಕೃಪಲಾನಿಯವರೂ ಈ ಯೋಜನೆಗೆ ಬೆಂಬಲವನ್ನು ನೀಡಿದರು. ಆಗಿನ ಕೇಂದ್ರ ಆರೋಗ್ಯ ಮಂತ್ರಿಗಳೂ ತಮ್ಮ ಎಲ್ಲ ಸಹಕಾರವನ್ನೂ ನೀಡಿದರು. ಇದರ ಫಲವಾಗಿ ಸರ್ಕಾರದಿಂದ ವಿವೇಕಾನಂದ ಪುರ ಎಂಬ ಸ್ಥಳದಲ್ಲಿ ೧೦ ಎಕರೆಯ ಉತ್ತಮ ಜಾಗವೂ ಸಿಕ್ಕಿತು. ಆಗ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ಮಾಧವಾನಂದಜೀಯವರು ಆಸ್ಪತ್ರೆಯ ಶಂಕುಸ್ಥಾಪನೆ ಮಾಡಿದರು. ಜನವರಿ ೧೯೬೭ರಲ್ಲಿ ಅಮೀನಾಬಾದ್‌ನಲ್ಲಿದ್ದ ರಾಮಕೃಷ್ಣ ಮಿಷನ್ ಸೇವಾಶ್ರಮ ವಿವೇಕಾನಂದಪುರದಲ್ಲಿನ ಹೊಸ ಜಾಗಕ್ಕೆ ಸ್ಥಳಾಂತರಗೊಂಡಿತು. ೧೯೭೦ರಲ್ಲಿ ವಿವೇಕಾನಂದ ಪಾಲಿಕ್ಲಿನಿಕ್ ಎಂಬ ಹೆಸರಿನಲ್ಲಿ ಈ ಬೃಹತ್ ಆಸ್ಪತ್ರೆಯು ಅಸ್ತಿತ್ವಕ್ಕೆ ಬಂತು. ಆಗ ಸಂಘದ ಅಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದಜಿಯವರು ಅದರ ಉದ್ಘಾಟನೆಯನ್ನು ನೆರವೇರಿಸಿದರು. ಅತ್ಯಾಧುನಿಕ ವ್ಯವಸ್ಥೆಗಳನ್ನೊಳಗೊಂಡ ಈ ಆಸ್ಪತ್ರೆ ಈಗ ಇನ್ನೂ ವಿಸ್ತಾರವಾಗಿ ಬೆಳೆದು ಲಕ್ನೋ ಜನತೆಯ ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರೊಂದಿಗೆ ಇಂದು ನರ್ಸಿಂಗ್ ತರಬೇತಿ ಶಾಲೆಯೂ ಇದೆ. ಅಲೋಪಥಿ, ಹೋಮಿಯೋಪಥಿ, ಆಯುರ್ವೇದ, ನ್ಯಾಚುರೋ ಪಥಿ ಮೊದಲಾದ ಅನೇಕ ವಿಧದ ಚಿಕಿತ್ಸೆ ಇಲ್ಲಿ ಲಭ್ಯವಿದೆ.

೧೯೯೯ರಲ್ಲಿ ಲಕ್ನೋದಲ್ಲಿ ನೂತನ ಆಕರ್ಷಕ ಕೇಂದ್ರವಾಗಿ ರಾಮಕೃಷ್ಣ ಮಿಷನ್ ದೇವಾಲಯದ ಉದ್ಘಾಟನೆಯಾಯಿತು. ಶಿಲ್ಪಕಲೆಯ ಸೋಜಿಗವೆಂಬಂತೆ ಇರುವ ಈ ದೇವಾಲಯವು ಹದಿಮೂರು ವರ್ಷಗಳ ದೀರ್ಘ ಅವಧಿಯಲ್ಲಿ ನಿರ್ಮಾಣವಾಗಿದೆ. ಈ ದೇವಾಲಯ ಸ್ವಾಮಿ ವಿವೇಕಾನಂದರು ಕಲ್ಕತ್ತೆಯ ಬೇಲೂರು ಮಠಕ್ಕೆ ಹಾಕಿಕೊಟ್ಟ ನಕ್ಷೆಯ ಮಾದರಿಯನ್ನೊಳಗೊಂಡಂತೆ ಆಧುನಿಕ ಕಲಾನೈಪುಣ್ಯವನ್ನು ಮೆರೆಯುತ್ತಿದೆ. ಈ ಅಮೋಘ ದೇವಾಲಯ ಅಮೃತಶಿಲೆ, ಹಿತ್ತಾಳೆ ಹಾಗೂ ತೇಗದ ಮರದ ಸುಂದರ ಸ್ವರಮೇಳವಿದ್ದಂತೆ. ಅಲ್ಲಿನವರೇ ಶಿಲ್ಪಶಾಸ್ತ್ರಜ್ಞರಾದ ಶ್ರೀಯುತ ದೇಶ್‌ಮನ್‌ಕರ್ ಮತ್ತು I.I.T ಕಾನ್ಪುರದ ಶಿಲ್ಪಶಾಸ್ತ್ರಜ್ಞರ ತಂಡ ಹಾಗೂ ಶಿಲ್ಪಶಾಸ್ತ್ರಜ್ಞ ಶ್ರೀಯುತ ಪಿ.ದಯಾರತ್ನಂ ಇವರ ಪರಿಶ್ರಮದಿಂದ ದೇವಾಲಯವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಭಾರತೀಯ ವಾಸ್ತುಶಿಲ್ಪದ ಪರಂಪರೆಯ ವೈಶಿಷ್ಟ್ಯವನ್ನು ಅತ್ಯಾಧುನಿಕ ಶಿಲ್ಪತಾಂತ್ರಿಕತೆಯೊಂದಿಗೆ ಸಾಕಾರಗೊಳಿಸಿರುವ ಒಂದು ಅಪೂರ್ವ ಪ್ರಯತ್ನ ಈ ದೇವಾಲಯದಲ್ಲಿ ಎದ್ದು ಕಾಣುತ್ತದೆ. ಗರ್ಭಗೃಹವನ್ನು ಹೊರತುಪಡಿಸಿ ೫೧೦೦ ಚದರ ಅಡಿಗಳ ವಿಶಾಲ ಪ್ರಾರ್ಥನಾಮಂದಿರ ಹಾಗೂ ೨೦೦ ಆಸನಗಳುಳ್ಳ ಒಂದು ಸಭಾಂಗಣ ಇವೆ. ಗರ್ಭಗೃಹದ ಮೇಲಿನ ಗೋಪುರದ ಎತ್ತರ ೯೦ ಅಡಿಗಳು. ದೇವಾಲಯದ ನಿರ್ಮಾಣ ಕಾರ್ಯಕ್ಕೆ ತುಂಬ ಸಹನೆ, ಸಮರ್ಪಣಾ ಮನೋಭಾವ ಹಾಗೂ ಹಣ ಬೇಕಾಯಿತು ಎಂದು ಅಲ್ಲಿನ ಸ್ವಾಮಿಗಳು ತಿಳಿಸುತ್ತಾರೆ. ಈ ಮಂದಿರದ ನಿರ್ಮಾಣ ವೆಚ್ಚ ೧೦ ಕೋಟಿ.

೨೦೦೦ದಲ್ಲಿ ೭೫ ವರ್ಷಗಳ ತನ್ನ ಯಶಸ್ವೀ ಸೇವೆಯನ್ನು ಪೂರ್ಣಗೊಳಿಸಿದ ಸ್ಮೃತಿಗಾಗಿ ಲಕ್ನೋದಲ್ಲಿನ ಈ ಸೇವಾಶ್ರಮ ತನ್ನ ಅಮೃತ ಮಹೋತ್ಸವವನ್ನು ಆಚರಿಸಿತು.

ಸ್ವಾಮಿ ವಿವೇಕಾನಂದರು ಈ ದೇಶದ ಜನರ ಮತ ಧರ್ಮಗಳ ವೈವಿಧ್ಯತೆಯನ್ನು ವಿಶೇಷವಾಗಿ ಗಮನಿಸಿಯೇ ಭಾರತಕ್ಕೆ ವಿಭಿನ್ನ ಮತಗಳ ಸೌಹಾರ್ದತೆಯ ಆವಶ್ಯಕತೆಯನ್ನು ಒತ್ತಿ ಹೇಳಿದ್ದರು. ಲಕ್ನೋದಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮವು ಎಲ್ಲ ವಿಧದ ಜನರಿಗೆ ವೈದ್ಯಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸೇವೆಯನ್ನು ತಲುಪಿಸುತ್ತಾ ಸ್ವಾಮೀಜಿಯವರ ಸ್ಫೂರ್ತಿಶಕ್ತಿಯ ಪ್ರತೀಕವಾಗಿ ನಿಂತಿದೆ.

**ಈ ಸಂಚಿಕೆಯ ಮುಖಪುಟದ ಚಿತ್ರ ಲಕ್ನೋ ರಾಮಕೃಷ್ಣ ಮಠದ ದೇವಾಲಯದ್ದು.**